ಬೈಂದೂರು ಕ್ಷೇತ್ರದಲ್ಲಿ ಪೊಲೀಸ್ ಠಾಣೆ, ಕ್ವಾರ್ಟರ್ಸ್‌ಗಳನ್ನು ಹೊಸತಾಗಿ ನಿರ್ಮಿಸುವುದು

792(883) ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೈಂದೂರು ಕ್ಷೇತ್ರದಲ್ಲಿ ಯಾವ ಯಾವ ಪೋಲಿಸ್ ಠಾಣೆಗಳನ್ನು ನವೀಕರಣಗೊಳಿಸುವ ಬಗ್ಗೆ ಹಾಗೂ ಹೊಸ ಕಟ್ಟಡಗಳನ್ನು ಕಟ್ಟುವ ಬಗ್ಗೆ ಪ್ರಸ್ತಾವನೆ ಬಂದಿದೆಯೆ;

ಆ) ಹಾಲಿ ಇರುವ ಪೊಲೀಸ್ ಸಿಬ್ಬಂದಿಗಳಿಗೆ ಸರಿಯಾದ ಕ್ವಾರ್ಟರ್ಸ್ ಇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ಕ್ವಾರ್ಟರ್ಸ್‌ಗಳನ್ನು ನೀಡಲು ಮಂಜೂರಾತಿ ನೀಡಬಹುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬೈಂದೂರು ಮತ್ತು ಕೊಲ್ಲೂರು ಪೊಲೀಸ್ ಠಾಣೆಗಳು ಬರುತ್ತಿದ್ದು, ಸದರಿ ಪೊಲೀಸ್ ಠಾಣೆಯ ಕಟ್ಟಡಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ;

ಆ) ಹೌದು,

ಇ) ಪರಿಶೀಲನೆಯಲ್ಲಿದೆ.

1984ಕ್ಕಿಂತ ಮುಂಚೆ ನೇಮಕವಾದ ದಿನಗೂಲಿ ನೌಕರರನ್ನು ಸರ್ವೋನ್ನತ ನ್ಯಾಯಾಲಯದ ತೀರ್ಪಿನಂತೆ ಖಾಯಂಗೊಳಿಸಿ, ನೌಕರರನ್ನು ಇತರೆ ಇಲಾಖೆಗಳಲ್ಲಿ ವಿಲೀನಗೊಳಿಸುವುದು

793(1219) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದ ರೇಷ್ಮೆ ಲೋಕೋಪಯೋಗಿ, ಅರಣ್ಯ ಹಾಗೂ ಇತರೆ ಇಲಾಖೆಗಳಲ್ಲಿ, 1984ಕ್ಕಿಂತ ಮುಂಚೆ ನೇಮಕವಾದ ದಿನಗೂಲಿ ನೌಕರರನ್ನು ಸರ್ವೋನ್ನತ ನ್ಯಾಯಾಲಯದ ತೀರ್ಪಿನಂತೆ ಖಾಯಂಗೊಳಿಸಿದ್ದು, ಇವರನ್ನು ಇತರೆ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ವಿಲೀನಗೊಳಿಸುವ ಪ್ರಕ್ರಿಯೆ ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

ಅ) ಆ) ಸಕ್ರಮಗೊಳಿಸಲಾದ ದಿನಗೂಲಿ ನೌಕರರನ್ನು ಖಾಲಿ ಹುದ್ದೆಗಳಿಗೆ ಹಂಚಿಕೆ ಮಾಡುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ. ಡಿಪಿಎಆರ್ 2 ಎಸ್.ಎಲ್.ಸಿ. 1995, ದಿನಾಂಕ: 23.11.1995ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಗುರುತಿಸಿ ಅವುಗಳಿಗೆ ಸಕ್ರಮಗೊಂಡ ದಿನಗೂಲಿ ನೌಕರರನ್ನು ಹಂಚಿಕೆ ಮಾಡಲು ಈ ಸಮಿತಿಗಳು ಕ್ರಮ ಕೈಗೊಳ್ಳುತ್ತಿವೆ.